# ವನ್ಯವಿಜ್ಞಾನ

ನಿಸರ್ಗದೆಡೆಗೆ ಮಕ್ಕಳ ನಡಿಗೆ. . .





BANNERUGHATTA

WILDLIFE
CONSERVATION
GROUP

# ವನ್ಯವಿಜ್ಞಾನ

## ನಿಸರ್ಗದೆಡೆಗೆ ಮಕ್ಕಳ ನಡಿಗೆ. . .


BANNERUGHATTA
WILDLIFE CONSERVATION GROUP

#೧೧, ಸ್ಟಡಿ ಹೌಸ್,
ಕಾಳೇಶ್ವರಿ ಗ್ರಾಮ,
ರಾಗಿಹಳ್ಳಿ ಅಂಚೆ,
ಬೆಂಗಳೂರು ~ ೫೬೦೦೮೩.

**Vanya Vignana :** A report on project VANYA VIGNANA By WILDLIFE CONSERVATION GROUP, #11, Study House, Kaleshwari, Ragihalli Post, Bangalore – 560083.

# ಪರಿವಿಡಿ


ಕೃತಜ್ಞತೆಗಳು

ಪರಿಚಯ


ಕಾರ್ಯವಿಧಾನ

ಚಟುವಟಿಕೆಗಳು

ಅನುಬಂಧಗಳು

- ಸ್ವಯಂಸೇವಕರು
- ಕಾರ್ಯವೇಳಾ ಪಟ್ಟಿ
- ಅಂಕಿ-ಅಂಶಗಳು
- ಅನಿಸಿಕೆಗಳು
- ಛಾಯಾಚಿತ್ರಗಳು

ಉಲ್ಲೇಖಗಳು

# ಕೃತಜ್ಞತೆಗಳು

ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್‌ನ ಹಲವು ಕಾರ್ಯಕ್ರಮಗಳಲ್ಲಿ ವನ್ಯವಿಜ್ಞಾನ ಕಾರ್ಯಕ್ರಮವೂ ಒಂದು. ಕಳೆದ ನಾಲ್ಕು ತಿಂಗಳುಗಳಿಂದ ನಡೆದುಕೊಂಡು ಬಂದಿರುವ ಈ ಕಾರ್ಯಕ್ರಮವು  ವನ್ಯಜೀವಿ, ಅವುಗಳ ಆವಾಸಗಳ ಸಂರಕ್ಷಣೆ ಮತ್ತು ವಿಜ್ಞಾನ ವಿಷಯಗಳ ಕುರಿತು ಮಕ್ಕಳಲ್ಲಿ ಅರಿವು ಮೂಡಿಸುವಂತಹಾ ಕಾರ್ಯಕ್ರಮವಾಗಿದೆ. ಈಗ ಮೊದಲ ಹಂತ ಮುಗಿದಿದ್ದು ಈ ಕಾರ್ಯಕ್ರಮದ ಆಗು-ಹೋಗುಗಳ ಒಂದು ಪುಟ್ಟ ವರದಿ ಇದಾಗಿದ್ದು ಈ ಯೋಜನೆಯು ಕಾರ್ಯರೂಪಕ್ಕೆ ತರಲು ಆಶೀರ್ವಧಿಸಿದಂತಹ ಶ್ರೀ ಸ್ವಾಮಿ ಸೌಖ್ಯಾನಂದಜೀ ಮಹಾರಾಜ್, ರಾಮಕೃಷ್ಣ ಮಿಷನ್, ಶಿವನಹಳ್ಳಿ ಇವರಿಗೆ ನಮ್ಮ ಹೃದಯಪೂರ್ವ ಕೃತಜ್ಞತೆಗಳು.

ಈ ಕಾರ್ಯಕ್ರಮವನ್ನು ಶಾಲೆಗಳಲ್ಲಿ ನಡೆಸಲು ಅನುಮತಿ ನೀಡಿದಂತಹಾ ಶಾಲಾ ಮುಖ್ಯೋಪಾಧ್ಯಾಯರಿಗೂ ಹಾಗೂ ಸಹಕರಿಸಿದ ಸಹಶಿಕ್ಷಕರಿಗೂ ಕೃತಜ್ಞತೆಗಳು.

ಸ್ವಯಂಸೇವಕರೇ ಈ ಕಾರ್ಯಕ್ರಮದ ರುವಾರಿಗಳು. ತಮ್ಮ ಅಮೂಲ್ಯವಾದ ಸಮಯವನ್ನು ಸಾಮಾಜಿಕ ಕಳಕಳಿಗೆ ಮೀಸಲಿಟ್ಟು ಇಂತಹಾ ಉತ್ತಮ ಕಾರ್ಯಗಳಿಗೆ ಕೈ ಜೋಡಿಸಲು ಸದಾ ಸಿದ್ದರಿದ್ದೇವೆ, ಎಂಬ ಆಶಯದೊಂದಿಗೆ ಈ ನಾಲ್ಕು ತಿಂಗಳು ನಮ್ಮ ತಂಡದೊಂದಿಗೆ ಜೊತೆಗೂಡಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಎಲ್ಲ ಸ್ವಯಂಸೇವಕರಿಗೂ ಕೃತಜ್ಞತೆಗಳು. ನಮ್ಮ ತಂಡದ ಮೂಲ ಸಂಸ್ಥಾಪಕರಾದ ಶ್ರೀ ಶಂಕರಪ್ಪ ಕೆ.ಪಿ, ಹಾಗೂ ಈ ಕಾರ್ಯಕ್ರಮಕ್ಕೆ ಪರೋಕ್ಷವಾಗಿ ಸಹಕರಿಸಿದ ಶ್ರೀ ವಿಪಿನ್ ಬಾಳಿಗ ಹಾಗೂ ಶ್ರೀ ಕಾರ್ತಿಕ್ ಎ.ಕೆ ರವರಿಗೂ ಧನ್ಯವಾದಗಳು.

ಈ ಕಾರ್ಯಕ್ರಮ ನಡೆದದ್ದು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಸುರಕ್ಷಿತವಲಯದಲ್ಲಿ ಆದ್ದರಿಂದ ಶಾಲೆಗಳನ್ನು ಸ್ವಯಂಸೇವಕರು ತಲುಪಲು ಸಾರಿಗೆ ವ್ಯವಸ್ಥೆಗಾಗಿ ತಮ್ಮ ವಾಹನಗಳನ್ನು ನೀಡಿದಂತಹ ಶ್ರೀ ರಘು ಕೆ.ಎಂ., ಶ್ರೀ ರಾಮಯ್ಯ ಕೆ.ಆರ್., ಶ್ರೀ ರಾಮಸ್ವಾಮಿ ಎನ್, ಮತ್ತು ಶ್ರೀ ಆನಂದ ರವರಿಗೂ ಧನ್ಯವಾದಗಳು.

# ಪರಿಚಯ

## ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್

**Wildlife Conservation Group,** ಪರಿಸರ ಆಸಕ್ತಿ ಹೊಂದಿರುವ ಸಮಾನ ಮನಸ್ಕರ ಒಂದು ಚಿಕ್ಕ ತಂಡ. ಕಾಡಿನ ಸಂರಕ್ಷಣೆ, ನಿರ್ವಹಣೆ ಮತ್ತು ಅರಣ್ಯ ಅಭಿವೃದ್ಧಿ ನಿಟ್ಟಿನಲ್ಲಿ ಗಿಡ ಮರಗಳನ್ನು ಬೆಳೆಸಿ ಸಂರಕ್ಷಿಸಿ ಸುಸ್ಥಿರ, ಅಭಿವೃದ್ಧಿ ಮಾದರಿಯಲ್ಲಿ ಪರಿಸರವನ್ನು ಸಂರಕ್ಷಿಸಿ ಇಂದಿನ ಮತ್ತು ಮುಂದಿನ ಪೀಳಿಗೆಗೆ ಉಳಿಸುವುದು ನಮ್ಮ ಧ್ಯೇಯ.

ನಮ್ಮ ತಂಡವು ಪರಿಸರ, ಕಾಡು, ವನ್ಯಜೀವಿಗಳ ಸಂರಕ್ಷಣೆ ಮತ್ತು ಕಾಡ್ಗಿಚ್ಚು ನಿರ್ವಹಣೆಯ ಬಗ್ಗೆ ಹಲವು ಕಾರ್ಯಕ್ರಮಗಳನ್ನು ರೂಪಿಸಿದೆ. ಇವುಗಳಲ್ಲಿ ನಾವೇ ಛಾಯಾಚಿತ್ರಿಸಿರುವ ವನ್ಯ ಜೀವಿಗಳ ಚಿತ್ರಗಳನ್ನು ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಮತ್ತು ಬಂಡೀಪುರ ಸುರಕ್ಷಿತ ವಲಯಗಳಲ್ಲಿನ ಶಾಲಾ-ಕಾಲೇಜುಗಳಲ್ಲಿ ಛಾಯಾಚಿತ್ರ ಪ್ರದರ್ಶನವನ್ನು ಏರ್ಪಡಿಸಿದ್ದೇವೆ. ಇದರ ಮೂಲಕ ಮಕ್ಕಳಲ್ಲಿ ಅವರ ಸುತ್ತಮುತ್ತಲಿನ ಪರಿಸರದಲ್ಲೇ ಇರುವ ಕಾಡು-ವನ್ಯಜೀವಿಗಳ ಬಗ್ಗೆ ಅರಿವನ್ನು ಹೆಚ್ಚಿಸುವುದಲ್ಲದೆ, ಅವರಲ್ಲಿ ಇರುವ ಸೃಜನಶೀಲತೆಗೆ ಉತ್ತೇಜನ ನೀಡಲಾಗುತ್ತಿದೆ. ಮತ್ತು ಮಾನವ ಹಾಗೂ ಕಾಡಿನ ನಡುವೆ ಇರುವ ಪರಸ್ಪರ ಅವಲಂಬನೆಯ ಬಗ್ಗೆ ತಿಳಿಸಲಾಗುತ್ತಿದೆ.

ನಮ್ಮ ತಂಡದ ಬಹುತೇಕ ಸದಸ್ಯರೆಲ್ಲಾ ಕಾಡಿನ ಅಂಚಿನಲ್ಲೇ ವಾಸವಿರುವುದರಿಂದ ನಮ್ಮ ಬಳಿಯೇ ತೆರೆದ ಪ್ರಯೋಗಶಾಲೆಯಂತಿರುವ ಕಾಡಿನಿಂದ, ಸತತವಾಗಿ ಹೊಸ ಹೊಸ ವಿಚಾರಗಳನ್ನು ನಿರಂತರವಾಗಿ ಕಲಿಯುತ್ತಿದ್ದೇವೆ.

## ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ

ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನವು ಬೆಂಗಳೂರು ಹೃದಯ ಭಾಗದಿಂದ ಕೇವಲ 20 ಕಿಲೋಮೀಟರ್ ದೂರದಲ್ಲಿ ನೆಲೆಗೊಂಡಿದೆ. ಈ ಅರಣ್ಯ ಪ್ರದೇಶವನ್ನು 1974ರಲ್ಲಿ ರಾಷ್ಟ್ರೀಯ ಉದ್ಯಾನವನವನ್ನಾಗಿ ಘೋಷಿಸಲಾಯಿತು. ಉದ್ಯಾನವನ 256 ಚದರ ಕಿಲೋಮೀಟರ್ ಪ್ರದೇಶವನ್ನು ಒಳಗೊಂಡಿದೆ, ಇದು ಎಲೆ ಉದುರುವ ಶುಷ್ಕ ಕಾಡಾಗಿದ್ದು, ಹುಲ್ಲುಗಾವಲು, ಬಂಡೆ,

ಕುರುಚಲುಕಾಡು ಪ್ರದೇಶಗಳಿಂದ ಕೂಡಿದೆ. ಆಡಳಿತಾತ್ಮಕವಾಗಿ ಉದ್ಯಾನವನವನ್ನು ಬನ್ನೇರುಘಟ್ಟ ವನ್ಯಜೀವ ವಲಯ, ಹಾರೋಹಳ್ಳಿ ವನ್ಯಜೀವಿ ವಲಯ, ಆನೇಕಲ್ ವನ್ಯಜೀವಿ ವಲಯ ಮತ್ತು ಕೋಡಿಹಳ್ಳಿ ವನ್ಯಜೀವಿ ವಲಯಗಳಾಗಿ ವಿಂಗಡಿಸಲಾಗಿದೆ.

ಈ ಕಾಡಿನ ಆವಾಸಕ್ಕೆ ತಕ್ಕಂತೆ ಆನೆ, ಕಾಟಿ, ಜಿಂಕೆ, ಕೆನ್ನಾಯಿ, ನರಿ, ಚಿರತೆ, ಕರಡಿ, ಕಾಡುಬೆಕ್ಕು, ಮುಳ್ಳುಹಂದಿ, ಕಾಡುಹಂದಿ, ಮೊಲ ಮೊದಲಾದ ಸಸ್ತನಿಗಳಿವೆ. ಇತ್ತೀಚಿಗೆ ಹುಲಿಯು ಕಾಣಿಸಿಕೊಂಡಿದೆ. ಅಪರೂಪದ ಕೆಲ ಪಕ್ಷಿಗಳಾದ ರಣಹದ್ದು, ಹಾವು ಗಿಡುಗ, ದಾಸಕೊಕ್ಕರೆ, ಹೆಜ್ಜರ್ಲೆ, ಬೂದು ಮಂಗಟ್ಟೆ, ಮೀನು ಗುಮ್ಮ, ನವರಂಗ, ಸಿಮಿಟರ್ ಬ್ಯಾಬ್ಲರ್, ವೆರಿಡಿಟ್ಟರ್ ಪ್ಲೈ ಕ್ಯಾಚರ್, ರೋಸೀ ಪ್ಯಾಸ್ಟರ್, ಶಮಾ, ನೀಲಿ ಕಲ್ಲುಗುಟ್ಟುರ ಮತ್ತು ಪಟ್ಟೆನೆಲಗುಟುರ ಮುಂತಾದ 180ಕ್ಕೂ ಹೆಚ್ಚು ಪಕ್ಷಿಸಂಕುಲ, ಕಪ್ಪೆಗಳು, ಹಾವುಗಳು, ಹಲವಾರು ಜಾತಿಯ ಮರ-ಗಿಡ, ಔಷದಿಯ ಸಸ್ಯಗಳನ್ನೊಳಗೊಂಡ ಸಂಪದ್ಭರಿತವಾದ ಅರಣ್ಯವಾಗಿದೆ.

## ವನ್ಯ ವಿಜ್ಞಾನ

ವನ್ಯವಿಜ್ಞಾನ ಕಾರ್ಯಕ್ರಮವು ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್ ನ ಹಲವು ಕಾರ್ಯಕ್ರಮಗಳಲ್ಲಿ ಒಂದು. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಮತ್ತು ಬಂಡೀಪುರ ರಾಷ್ಟ್ರೀಯ ಉದ್ಯಾನವನಗಳ ಒಂದು ಕಿಲೋಮೀಟರ್ ವ್ಯಾಪ್ತಿಯ (Buffer Zone) ಸುರಕ್ಷಿತ ವಲಯದ ಶಾಲೆಗಳಲ್ಲಿ ಮಕ್ಕಳಿಗೆ ಕೆರೆ, ನದಿ, ಬೆಟ್ಟ-ಗುಡ್ಡ, ಕಾಡು, ವನ್ಯಜೀವಿಗಳು, ಪರಿಸರದ ಬಗ್ಗೆ ಅರಿವು ಮೂಡಿಸುವ ಮತ್ತು ಅವರಲ್ಲಿ ಪರಿಸರ ಸಂರಕ್ಷಣೆಯ ಪ್ರಜ್ಞೆ ಹಾಗೂ ಭೂಮಿಯ ಸಕಲ ಜೀವಿಗಳೊಂದಿಗೆ ಸಹಬಾಳ್ವೆಯಿಂದ ಬದುಕುವ ಪ್ರೀತಿಯನ್ನು ಬೆಳೆಸುವ ಕಾರ್ಯಕ್ರಮವಾಗಿದೆ.

## ಕಾರ್ಯವಿಧಾನ


ಈ ಕಾರ್ಯಕ್ರಮಕ್ಕೆ ಮೊದಲ ಹಂತವಾಗಿ ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನ ಸುರಕ್ಷಿತ ವಲಯದಲ್ಲಿ ಬರುವ ಶಾಲೆಗಳನ್ನು ಗಮನದಲ್ಲಿಟ್ಟುಕೊಂಡು, ಬನ್ನೇರುಘಟ್ಟ, ಬೆಳಗನಗುಪ್ಪೆ, ತಟ್ಟೆಕರೆ ಮತ್ತು ಉರಗನದೊಡ್ಡಿಯ ಸರ್ಕಾರಿ ಶಾಲೆಗಳನ್ನು ಆಯ್ದುಕೊಂಡೆವು. ಮೇಲಿನ ಪ್ರತಿ ಶಾಲೆಗೆ ತೆರಳಿ ಮುಖ್ಯೋಪಾಧ್ಯಾಯರಿಗೆ ವನ್ಯವಿಜ್ಞಾನ ಕಾರ್ಯಕ್ರಮದ ಬಗ್ಗೆ ತಿಳಿಸಿಕೊಟ್ಟು

ಅನುಮತಿಯನ್ನು ಪಡೆಯಲಾಯಿತು. ವನ್ಯವಿಜ್ಞಾನವು ಸಂಪೂರ್ಣವಾಗಿ ಪ್ರಯೋಗಾತ್ಮಕ ಹಾಗೂ ಮಗು ಸ್ವತಃ ಮಾಡಿ ಕಲಿಯುವ ಚಟುವಟಿಕೆಗಳಿಂದ ಕೂಡಿದೆ. ಮಕ್ಕಳು ಜೀವಿಸಿರುವ ಪರಿಸರದಲ್ಲಿನ ಜೀವ ವೈವಿಧ್ಯತೆಯ ಬಗ್ಗೆ ಹೊರ ಸಂಚಾರಗಳ ಮೂಲಕ ಸಂಪನ್ಮೂಲ ವ್ಯಕ್ತಿಗಳ ಮೂಲಕ ತಿಳಿಯುವರು. ಪ್ರತೀ ಶಾಲೆಯಲ್ಲಿ ವಾರಕ್ಕೆ ಒಂದು ದಿನದಂತೆ ತರಗತಿಗಳನ್ನು ನಡೆಸಲು ತಂಡವು ನಿರ್ಧರಿಸಿ ನಾಲ್ಕು ತಿಂಗಳ ವೇಳಾಪಟ್ಟಿಯನ್ನು ತಯಾರಿಸಿಲಾಯಿತು. ಪ್ರತೀ ಶಾಲೆಯ ಮುಖ್ಯೋಪಾಧ್ಯಾಯರಿಗೆ ಮತ್ತು ತಂಡದ ಸ್ವಯಂ ಸೇವಕರಿಗೆ ವೇಳಾಪಟ್ಟಿಯ ಪ್ರತಿಯನ್ನು ನೀಡಲಾಯಿತು.

## ಚಟುವಟಿಕೆಗಳು

ಪ್ರಸ್ತುತ ಶಾಲೆಗಳಲ್ಲಿ ನಡೆದ ಯೋಜಿತ ಕಾರ್ಯಕ್ರಮಗಳ ಬಗ್ಗೆ.

- **ವನಸಂಚಾರ:** ಮಗುವು ವಾಸಿಸಿರುವ ಪರಿಸರದ ಪರಿಚಯ ಮಾಡಿಕೊಡಲು ಮಕ್ಕಳನ್ನು ಶಾಲೆಯ ಸುತ್ತಲಿನ ಕೆರೆ, ಬೆಟ್ಟ-ಗುಡ್ಡ, ಹಳ್ಳ-ಕೊಳ್ಳಗಳಿಗೆ ಕರೆದೊಯ್ದು, ಅಲ್ಲಿ ಕಾಣಸಿಗುವ ಪಕ್ಷಿಗಳು, ಬಣ್ಣ ಬಣ್ಣದ ಚಿಟ್ಟೆಗಳು, ಕೀಟ-ದುಂಬಿಗಳ ಪ್ರಥಮ ಪರಿಚಯವನ್ನು ನಮ್ಮ ಸಂಪನ್ಮೂಲ ವ್ಯಕ್ತಿಗಳು ಮಾಡಿಕೊಟ್ಟರು. ಹಳ್ಳಿಯ ಸುತ್ತಮುತ್ತಲಿನ ಸಸ್ಯಸಂಕುಲದ ಕಿರುಪರಿಚಯವನ್ನು ವೈಜ್ಞಾನಿಕವಾಗಿ ತಿಳಿಸಿಕೊಟ್ಟರು. ಈ ಕಾರ್ಯಕ್ರಮದಲ್ಲಿ ಮಕ್ಕಳು ಉತ್ಸಾಹದಿಂದ ಭಾಗವಹಿಸಿ ನಮಗೇ ತಿಳಿಯದ ಎಷ್ಟೊಂದು ಗಿಡಗಳ ಕನ್ನಡದ ಪ್ರಾದೇಶಿಕ ಹೆಸರು ಹಾಗೂ ಔಷಧೀಯ ಉಪಯೋಗಗಳನ್ನು ತಿಳಿಸಿದರು. ಬನ್ನೇರುಘಟ್ಟ ರಾಷ್ಟ್ರೀಯ ಉದ್ಯಾನವನದ ಅಂಚಿನಲ್ಲಿರುವ ಬೆಳಗನಕುಪ್ಪೆ ಕೆರೆಗೆ ಬೇಟಿ ನೀಡಿದೆವು. ಅಲ್ಲಿ ಕಂಡುಬಂದ ವನ್ಯಜೀವಿಗಳ ಹೆಜ್ಜೆಗುರುತು ಸಹಾಯದಿಂದ ಕೆರೆಗೆ ಆಗಮಿಸಿದ್ದ ವನ್ಯಜೀವಿಗಳನ್ನು ಗುರುತಿಸುವುದನ್ನು ತಿಳಿಸಿಕೊಡಲಾಯಿತು. ಮಕ್ಕಳು ಕೆರೆಯ ಆವಾಸ, ಜಲಸಸ್ಯಗಳು, ಪಕ್ಷಿಗಳು, ಕಪ್ಪೆಗಳ ಬಗ್ಗೆ ಆಸಕ್ತಿಯಿಂದ ತಿಳಿದುಕೊಂಡರು. ಜೊತೆಗೆ ಕೆರೆಯ ಸಂರಕ್ಷಣೆ, ಜಲಮಾಲಿನ್ಯ, ನೀರಿನ ಮಿತಬಳಕೆಯ ಮತ್ತು ಪ್ರಾಮುಖ್ಯತೆ ಬಗ್ಗೆ ಚರ್ಚಿಸಲಾಯಿತು.





- **ಛಾಯಾಚಿತ್ರ ಪ್ರದರ್ಶನ**: ಬನ್ನೇರುಘಟ್ಟ ಮತ್ತು ಬಂಡೀಪುರ ಕಾಡುಗಳ ಸುತ್ತಲಿನ ಶಾಲಾ ಮಕ್ಕಳಿಗೆ ನಮ್ಮ ತಂಡದ ಸದಸ್ಯರೇ ಛಾಯಾಚಿತ್ರಿಸಿರುವ ವನ್ಯಜೀವಿ, ಕಾಡು, ಸರಿಸೃಪಗಳು ಹಾಗೂ ಪಕ್ಷಿ, ಕೀಟಗಳನ್ನು ಶಾಲೆಗಳಲ್ಲಿ ಪ್ರದರ್ಶಿಸಲಾಯಿತು. ಮಕ್ಕಳು ತಮ್ಮ ಸುತ್ತಮುತ್ತಲಿನ ಪರಿಸರದ ಕೌತುಕಗಳ ಬಗ್ಗೆ ಚಿತ್ರ ಸಹಿತ ತಿಳಿದುಕೊಂಡರು.

- **ಪರಿಸರಕ್ಕೆ ಸಂಬಂಧಪಟ್ಟ ಸಾಕ್ಷ್ಯಾ ಚಿತ್ರ ಪ್ರದರ್ಶನ:** ಪರಿಸರ ಸಂರಕ್ಷಣೆ ಹಾಗೂ ಮಾನವ ಮತ್ತು ಕಾಡುಗಳ ನಡುವೆ ನಡೆಯುತ್ತಿರುವ ಸಂಘರ್ಷದ ಬಗೆಗಿನ **ನಾಗರಹೊಳೆ, ಕಾಳೀ, ಭದ್ರಾ, ಹೋಂ, ಪರಿಸರ ಸ್ನೇಹಿ ಗಣಪತಿ,** ಮೊದಲಾದ ಸಾಕ್ಷ್ಯಾ ಚಿತ್ರಗಳನ್ನು ಶಾಲೆಗಳಲ್ಲಿ ಪ್ರದರ್ಶಿಸಿದೆವು.
- **ಚಿತ್ರಕಲೆ:** ಚಿತ್ರ ಬಿಡಿಸುವುದೆಂದರೆ ಮಕ್ಕಳಿಗೆ ಎಲ್ಲಿಲ್ಲದ ಆಸಕ್ತಿ. ನೆಲದ ಮೇಲೆ ಗೋಡೆಯ ಮೇಲೆ ಸಿಕ್ಕಸಿಕ್ಕ ವಸ್ತುಗಳನ್ನೇ ಬಳಸಿ ತಮಗೆ ಅನಿಸಿದ ಯೋಚನೆಗಳನ್ನು ಚಿತ್ರಗಳ ಮೂಲಕ ರಚಿಸಿ ಅಭಿವ್ಯಕ್ತಿಸುತ್ತವೆ. ಇದು ಮಕ್ಕಳಿಗೆ ಮುದ ನೀಡುತ್ತದೆ. ಮಕ್ಕಳ ಈ ಚಿತ್ರಕಲೆಯ ಆಸಕ್ತಿಯನ್ನೇ ಕಲಿಕೆಯ ಸಾಧನವಾಗಿ ಬಳಸಿಕೊಂಡ ನಮ್ಮ ತಂಡ, ಅವರಿಗೆ ಬಣ್ಣ ಬ್ರಷ್ಷು, ಕಾಗದ-ಕ್ರಯಾನ್ ಅನ್ನು ಒದಗಿಸಿದೆವು. ವನ ಸಂಚಾರದಲ್ಲಿ ಮಕ್ಕಳಿಗೆ ಕಾಣಿಸಿದ ಕಾಡು ಹೂ, ಚಿಟ್ಟೆ , ಅಣಬೆ ,ಕೀಟ ,ಕೆರೆಯ ಅವಾಸ, ಪ್ರಾಣಿ-ಪಕ್ಷಿಗಳನ್ನು ಚಿತ್ರಿಸಲು ಹೇಳಿದೆವು. ನಿಸರ್ಗವನ್ನು ಗಮನಿಸಲು ಮಾರ್ಗದರ್ಶನ ಮಾಡಿದೆವು. ಮಕ್ಕಳು ಸಂತೋಷದಿಂದ ಚಿತ್ರ ಬಿಡಿಸಿ ಆನಂದಪಟ್ಟರು. ಜೊತೆಜೊತೆಗೆ ಅರಣ್ಯ ಹಾಗೂ ಜೀವಸಂಕುಲದ ಪ್ರಾಮುಖ್ಯತೆಯನ್ನು ತಿಳಿಸಿಕೊಟ್ಟೆವು. ಚೆನ್ನಾಗಿ ಬರೆದ ಚಿತ್ರಕ್ಕೆ ಬಹುಮಾನವನ್ನೂ ಕೊಟ್ಟು, ಕಲೆಯನ್ನು ಉತ್ತೇಜಿಸುವ, ಪ್ರೋತ್ಸಾಹಿಸುವ ಕೆಲಸವನ್ನು ನಮ್ಮ ತಂಡ ಮಾಡಿತು.

ಒಟ್ಟಿನಲ್ಲಿ ಚಿತ್ರಕಲೆಯ ಮೂಲಕ ಮಗುವು ವಾಸಿಸಿರುವ ಪರಿಸರದ ಗಿಡಮರ ಹೂ-ಬಳ್ಳಿ, ಬಣ್ಣದ ಚಿಟ್ಟೆ, ಕೀಟಸಮೂಹದ ಆಕಾರ, ಬಣ್ಣ, ವಿನ್ಯಾಸಗಳನ್ನು ನೋಡಿ ಗಮನಿಸಿ ತಮ್ಮ ಮನಪಟಲದಲ್ಲಿ ಶಾಶ್ವತವಾಗಿ ದಾಖಲಿಸಿಕೊಂಡರು. ಮಕ್ಕಳನ್ನು ನಿಸರ್ಗದ ಹತ್ತಿರಕ್ಕೆ ಕರೆದೊಯ್ಯುವಲ್ಲಿ ತಂಡ ಸಫಲವಾಗಿರುವುದನ್ನು ಮಕ್ಕಳು ಬಿಡಿಸಿರುವ ಚಿತ್ರಗಳಲ್ಲಿ ಕಾಣಬಹುದು.

- **ಹಬ್ಬಗಳಲ್ಲಿ ಪರಿಸರ ಸ್ನೇಹಿ ಆಚರಣೆ** : ಇತ್ತೀಚಿನ ದಿನಗಳಲ್ಲಿ ಹಬ್ಬ ಹರಿದಿನಗಳು ತನ್ನ ಮೂಲಸ್ವರೂಪವನ್ನು ಕಳೆದುಕೊಂಡು ಆಡಂಬರದತ್ತ ಸಾಗುತ್ತಿವೆ. ಇದೆ ಕಾರಣದಿಂದ ಪರಿಸರಕ್ಕೆ ಹಾನಿಕರಕ ರಾಸಾಯನಿಕಗಳಿಂದ ತಯಾರಿಸಿದ ಶೃಂಗಾರ ಸಾಮಾಗ್ರಿಗಳು ಕೃತಕ ಬಣ್ಣಗಳು ಹಾಗೂ ಗಣೇಶ ಹಬ್ಬದ ಸಂದರ್ಭದಲ್ಲಿ ಗಣೇಶ ಮೂರ್ತಿಗಳನ್ನು ಸಹ ಪ್ಲಾಸ್ಟರ್ ಆಫ್ ಪ್ಯಾರೀಸ್ ಮತ್ತು ರಾಸಾಯನಿಕ ಬಣ್ಣಗಳಿಂದ ತಯಾರಿಸಿರುತ್ತಾರೆ. ಹೀಗೆ ಹಬ್ಬಗಳ ಸಡಗರಕ್ಕೆ ನಮ್ಮ ಸುತ್ತಮುತ್ತಲಿನ ಪರಿಸರ, ಕೆರೆ-ಕುಂಟೆ ಮಲಿನವಾಗುತ್ತಿದೆ. ಈ ನಿಟ್ಟಿನಲ್ಲಿ ಪ್ಲಾಸ್ಟರ್ ಆಫ್ ಪ್ಯಾರೀಸ್ ಮತ್ತು ರಾಸಾಯನಿಕ ಬಣ್ಣಗಳಿಂದ ಪರಿಸರದ ಮೇಲಾಗುತ್ತಿರುವ ಹಾನಿ ಮತ್ತು ಇದರಿಂದ ಮಾನವನ ಮೇಲಾಗುತ್ತಿರುವ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲಾಗಿದೆ. ಪರಿಸರ ಸ್ನೇಹಿ ಗಣೇಶಗಳನ್ನು ಪ್ರತಿಷ್ಠಾಪಿಸಿ ಪೂಜಿಸಲು ಮಕ್ಕಳಿಗೆ ತಿಳಿಸಲಾಯಿತು.

- **ಪರಿಸರ ಜಾಗೃತಿ ಸಾಂಸ್ಕೃತಿಕ ಕಾರ್ಯಕ್ರಮಗಳು:** ಮಕ್ಕಳಿಗೆ ಪಾಠಕ್ಕಿಂತ ಕಥೆ, ಹಾಡು, ನಾಟಕಗಳೆಂದರೆ ತುಸು ಒಲವು ಹೆಚ್ಚಿರುತ್ತದೆ, ಈ ನಿಟ್ಟಿನಲ್ಲಿ ಹಾಡು-ಹಸೆ, ಕಥೆ ನಾಟಕಗಳ ಮುಖಾಂತರ ತಿಳಿಸಿಕೊಟ್ಟ ವಿಷಯಗಳು ಮಕ್ಕಳ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿಯುತ್ತವೆ. ಕಾಡು, ಪರಿಸರ, ಸ್ವಚ್ಚತೆ, ಪ್ರಾಣಿ-ಪಕ್ಷಿಗಳ ಬಗೆಗಿನ ಹಾಡು, ನಾಟಕಗಳನ್ನು ಮಕ್ಕಳಿಗೆ ಕಲಿಸಿದೆವು, ಮನುಷ್ಯರಿಂದ ಪರಿಸರಕ್ಕಾಗುತ್ತಿರುವ ನಿರಂತರ ಮಲಿನದಿಂದಾಗುವ ಪರಿಣಾಮದಂತಹ ಬೀದಿನಾಟಕಗಳನ್ನು ಮಕ್ಕಳ ಕೈಯಿಂದ ಮಾಡಿಸಲಾಯಿತು.

- **ವಿಜ್ಞಾನ ಪ್ರಯೋಗಗಳು:** ಮಕ್ಕಳಲ್ಲಿ ವೈಜ್ಞಾನಿಕ ಚಿಂತನೆಯ ಮನೋಭಾವವನ್ನು ಬೆಳೆಸಲು ಅವರ ಪಠ್ಯಕ್ಕೆ ಪೂರಕವಾದ ಮಕ್ಕಳೆ ಮಾಡಿ ಕಲಿಯಬಹುದಾದ ವಿಜ್ಞಾನದ ಪ್ರಯೋಗಗಳನ್ನು ಆರಿಸಿಕೊಂಡೆವು. ಪ್ರತೀ ತರಗತಿಯ ಮಕ್ಕಳನ್ನು ಗುಂಪುಗಳಾಗಿ ವಿಂಗಡಿಸಿದೆವು, ಪ್ರಯೋಗಕ್ಕೆ ಬೇಕಾದ ಸಾಮಗ್ರಿಗಳನ್ನು ಕೊಟ್ಟೆವು. ಪ್ರಯೋಗದ ವಿವರಣೆ ಮತ್ತು ಹೇಗೆ ಮಾಡಬೇಕೆಂಬ ಪ್ರಾಥಮಿಕ ವಿವರಣೆಯನ್ನು ನೀಡಿ ಮಕ್ಕಳು ತಾವೇ ಮಾಡಿ ಕಲಿಯುವಂತೆ ಅನುವು ಮಾಡಿಕೊಟ್ಟೆವು ಇದರಿಂದ ಮಕ್ಕಳು ವೈಜ್ಞಾನಿಕ ಕುತೂಹಲದಿಂದ


ಖುಷಿಯಿಂದ ತಮ್ಮ ಸುತ್ತಮುತ್ತಾ ಇರುವ ನೀರು, ಗಾಳಿ, ಬೆಳಕು, ವಿದ್ಯುತ್, ಆಯಸ್ಕಾಂತ ಇವೇ ಮೊದಲಾದವುಗಳ ವೈಜ್ಞಾನಿಕ ಗುಣಲಕ್ಷಣಗಳನ್ನು ಪ್ರಾಯೋಗಿಕವಾಗಿ ತಿಳಿಸಿದೆವು. ಈ ಪ್ರಯೋಗಗಳಿಗೆ ಬೇಕಾದ ಸಾಮಗ್ರಿಗಳ ಕ್ರೂಡೀಕರಣ, ಪ್ರಯೋಗಗಳ ಯೋಜನೆ, ನಿರ್ವಹಣೆಯನ್ನ ನಮ್ಮ ತಂಡದ ಸ್ವಯಂಸೇವಕರು ಅಚ್ಚುಕಟ್ಟಾಗಿ ನಿರ್ವಹಿಸಿದರು. ಸೌಲಭ್ಯ ವಂಚಿತ ಗ್ರಾಮೀಣ ಮಗುವು ಹೊಸ ಹೊಸ ವಿಚಾರಗಳನ್ನು ತಿಳಿಯಲು ಅನುವು ಹಾಗೂ ಕ್ರಿಯಾಶೀಲತೆ ಬೆಳೆಸಿಕೊಳ್ಳಲು ಸೃಜನಶೀಲತೆಯ ಅಭಿವೃದ್ಧಿಪಡಿಸಿಕೊಳ್ಳುವ ಅವಕಾಶ ದೊರಕಿತು. ಗುಂಪಿನಲ್ಲಿ ಕಲಿಯುವ, ಗುಂಪಿನಲ್ಲಿ ಸಮಸ್ಯೆ ಬಿಡಿಸುವ ಕೌಶಲ್ಯಗಳನ್ನು ಬೆಳೆಸುವ, ವೈಜ್ಞಾನಿಕವಾಗಿ ಯೋಚಿಸುವ, ಪ್ರಶ್ನೆಮಾಡುವ, ಸ್ವಂತ ಯೋಚಿಸುವ ಕೌಶಲ್ಯಗಳನ್ನು ಕಲಿಯಲು ಮಕ್ಕಳಿಗೆ ಸಹಕಾರಿಯಾಗಿದೆ. ಈ ಕೌಶಲ್ಯಗಳೆ ಮಗುವು ತನ್ನ ಜೀವನದಲ್ಲಿ ಎದುರಿಸುವ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಯೋಚಿಸಿ ತಕ್ಕ ಪರಿಹಾರ ಪಡೆಯಲು ಸಹಾಯಕವಾಗುತ್ತದೆ ಎಂಬುದು ನಮ್ಮ ಗಟ್ಟಿ ಅಭಿಮತ. ಇದರ ಮೂಲಕ ಪರಿಸರದಲ್ಲಿ ಮಾನವನ ಪಾತ್ರದ ಕಿರುಪರಿಚಯ ಮತ್ತು ವನ್ಯಜೀವಿ ಸಂರಕ್ಷಣೆಯ ಕಡೆಗೆ ಮಗುವಿನ ಮನಸ್ಸು ನೈಸರ್ಗಿಕವಾದ ತುಡಿತ ಉಂಟಾಗುತ್ತದೆ ಎಂಬುದೇ ಈ ಕಾರ್ಯದ ಶಕ್ತಿಯಾಗಿದೆ. ಮಕ್ಕಳು ಪ್ರಯೋಗಗಳನ್ನು ಮಾಡುತ್ತಾ, ನೀರಿನಲ್ಲಿ ಆಡುತ್ತಾ, ಸ್ಥಾಯಿವಿದ್ಯುತ್, ವಕ್ರೀಭವನದ ಬೆಳಕಿನ ಚಲನೆ, ಅಯಾಸ್ಕಾಂತದ ಗುಣಗಳು, ಇತರೆ ಅನೇಕ ಪರಿಕಲ್ಪನೆಗಳನ್ನು ಖುಷಿಯಿಂದ ಕಲಿತು ಅರ್ಥಮಾಡಿಕೊಂಡರು.



## ಅನುಬಂಧಗಳು

- **ಸ್ವಯಂ ಸೇವಕರು** : ವನ್ಯವಿಜ್ಞಾನ ಕಾರ್ಯಕ್ರಮದ ಯಶಸ್ಸಿನ ಹಿಂದೆ ಸ್ವಯಂಸೇವಕರ ಪಾತ್ರ ಅತೀವ ಮುಖ್ಯವಾಗಿದ್ದು, ನಮ್ಮ ತಂಡದ ಸದಸ್ಯರೇ ಸ್ವಯಂಸೇವಕರಾಗಿ ಕಾರ್ಯನಿರ್ವಹಿಸಿದ್ದಾರೆ. ಈ ಕಾರ್ಯಕ್ರಮಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಸ್ವಯಂಸೇವಕರಿಗೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಪರಿಸರ, ಕಾಡು ಮತ್ತು ವನ್ಯಜೀವಿಗಳ ಬಗ್ಗೆ ಆಸಕ್ತಿ ಇರುವವರಿಗಾಗಿಯೇ ಸಾಮಾಜಿಕ ಜಾಲತಾಣಗಳಲ್ಲಿ ಒಂದು ಪುಟವನ್ನು ತೆರೆದು ಆಹ್ವಾನಿಸಲಾಗಿತ್ತು.

| ಸ್ವಯಂಸೇವಕರ ಪಟ್ಟಿ | | |
|---|---|---|
| ಕ್ರ.ಸಂ | ಹೆಸರುಗಳು | ವಿದ್ಯಾರ್ಹತೆ |
| 1 | ಶಂಕರಪ್ಪ .ಕೆ .ಪಿ | M.Sc ಭೌತಶಾಸ್ತ್ರ |
| 2 | ಅಶ್ವಥ .ಕೆ .ಎನ್ | M.Sc ಭೂಗೋಳಶಾಸ್ತ್ರ-ಜಿಯೋ ಇನ್ ಫರ್ಮೇಟಿಕ್ಸ್ |
| 3 | ಸೋಮಶೇಖರ್ .ಸಿ | BE ಮೆಕ್ಯಾನಿಕಲ್ |
| 4 | ನಾಗೇಶ್ .ಓ .ಎಸ್ | M.Sc ಗಣಿತಶಾಸ್ತ್ರ |
| 5 | ಜೈ ಕುಮಾರ್ .ಆರ್ | BE ಮೆಕ್ಯಾನಿಕಲ್ |
| 6 | ಆನಂದ .ಆರ್ | BCA |
| 7 | ಅಶೋಕ .ಆರ್ | M.Sc ಜೀವ ರಾಸಾಯನಶಾಸ್ತ್ರ |
| 8 | ಗಿರೀಶ್ .ಎಂ | BE ಮೆಕ್ಯಾನಿಕಲ್ |
| 9 | ಆನಂದ .ಎಸ್ | BE ಕಂಪ್ಯೂಟರ್ ಸೈನ್ಸ್ |
| 10 | ರವಿ .ಪಿ | B.Sc |
| 11 | ಮನೋಜ್ ಕುಮಾರ್ .ಎಸ್ | BCA |



- **ಕಾರ್ಯವೇಳಾ ಪಟ್ಟಿ :**

ವನ್ಯವಿಜ್ಞಾನ ಕಾರ್ಯಕ್ರಮವನ್ನು ಕ್ರಮಬದ್ಧವಾಗಿ ನಡೆಸಲು ವೇಳಾಪಟ್ಟಿ ತುಂಬಾ ಪ್ರಮುಖವಾಗಿತ್ತು. ವಾರದಲ್ಲಿ ಎರಡೆರಡು ದಿನಗಳಂತೆ ನಾಲ್ಕು ಶಾಲೆಗಳಿಗೆ ದಿನಗಳನ್ನು ನಿಗಧಿಪಡಿಸಿ ನಿಗಧಿತ ದಿನದಂದು ಶಾಲೆಗಳಿಗೆ ಹೋಗಬೇಕಾದ ಸ್ವಯಂಸೇವಕರನ್ನು ನೇಮಿಸಿ, ಅಂದು ಶಾಲೆಗಳಲ್ಲಿ ಮಾಡಬೇಕಾದ ಕಾರ್ಯಚಟುವಟಿಕೆಗಳ ಬಗ್ಗೆ ತಿಳಿಸುವಂತಹ ವೇಳಾಪಟ್ಟಿಯನ್ನು ತಯಾರಿಸಿ, ಶಾಲೆಗಳಿಗೆ ನಾಲ್ಕು ತಿಂಗಳ ವೇಳಾಪಟ್ಟಿಯನ್ನು ನೀಡಲಾಗಿತ್ತು.

ಆ ವೇಳಾಪಟ್ಟಿ ಈ ಕೆಳಕಂಡಂತೆ ಇದೆ.

| SL NO | Date | Week Day | School Name | |
|---|---|---|---|---|
| | | | Group A | Group B |
| 1 | 21/07/16 | Thursday | Beliganakuppe | Tattekere |
| 2 | 23/07/16 | Saturday | Bannerghatta | Uruganadoddi |
| 3 | 28/07/16 | Thursday | Tattekere | Beliganakuppe |
| 4 | 30/07/16 | Saturday | Uruganadoddi | Bannerghatta |
| 5 | 04/08/16 | Thursday | Beliganakuppe | Tattekere |
| 6 | 06/08/16 | Saturday | Bannerghatta | Uruganadoddi |
| 7 | 11/08/16 | Thursday | Tattekere | Beliganakuppe |
| 8 | 13/08/16 | Saturday | Uruganadoddi | Bannerghatta |
| 9 | 18/08/16 | Thursday | Beliganakuppe | Tattekere |
| 10 | 20/08/16 | Saturday | Bannerghatta | Uruganadoddi |
| 11 | 25/08/16 | Thursday | Tattekere | Beliganakuppe |
| 12 | 27/08/16 | Saturday | Uruganadoddi | Bannerghatta |
| 13 | 01/09/16 | Thursday | Beliganakuppe | Tattekere |
| 14 | 03/09/16 | Saturday | Bannerghatta | Uruganadoddi |
| 15 | 06/09/16 | Thursday | Tattekere | Beliganakuppe |
| 16 | 10/09/16 | Saturday | Uruganadoddi | Bannerghatta |
| 17 | 15/09/16 | Thursday | Beliganakuppe | Tattekere |
| 18 | 17/09/16 | Saturday | Bannerghatta | Uruganadoddi |
| 19 | 22/09/16 | Thursday | Tattekere | Beliganakuppe |
| 20 | 24/09/16 | Saturday | Uruganadoddi | Bannerghatta |
| 21 | 29/09/16 | Thursday | Beliganakuppe | Tattekere |
| 22 | 01/10/16 | Saturday | Bannerghatta | Uruganadoddi |
| 23 | 06/10/16 | Thursday | Tattekere | Beliganakuppe |
| 24 | 08/10/16 | Saturday | Uruganadoddi | Bannerghatta |
| 25 | 13/10/16 | Thursday | Beliganakuppe | Tattekere |
| 26 | 15/10/16 | Saturday | Bannerghatta | Uruganadoddi |
| 27 | 20/10/16 | Thursday | Tattekere | Beliganakuppe |
| 28 | 22/10/16 | Saturday | Uruganadoddi | Bannerghatta |
| 29 | 27/10/16 | Thursday | Beliganakuppe | Tattekere |

• **ಅಂಕಿ-ಅಂಶಗಳು** : ನಿಗಧಿತ ಮೂರು ತಿಂಗಳಲ್ಲಿ ನಮ್ಮ ತಂಡ ನಾಲ್ಕು ಶಾಲೆಗಳಲ್ಲಿ ನಡೆಸಿರುವ ಕಾರ್ಯಚಟುವಟಿಕೆಗಳು, ವನಸಂಚಾರ, ಪ್ರಯೋಗಗಳು ಮತ್ತು ಸ್ಪರ್ಧೆಗಳು ಈ ಎಲ್ಲಾ ಕಾರ್ಯಕ್ರಮಗಳಲ್ಲಿ ಭಾಗವಹಿಸಿರುವ ವಿದ್ಯಾರ್ಥಿಗಳ ಅಂಕಿ-ಅಂಶಗಳು ಈ ಕೆಳಕಂಡಂತಿವೆ.

| *SCHOOLS* | *DATE* | *TEACHERS participated* | *BOYS* | *GIRLS* | *TOTAL* |
|---|---|---|---|---|---|
| GHPS TATTEKERE | 21-07-2016 | | 4 | 16 | 20 |
| | 27-07-2016 | | 11 | 10 | 21 |
| | 04-08-2016 | | 10 | 8 | 18 |
| | 11-08-2016 | | 8 | 4 | 12 |
| | 18-8-2016 | 1 | 22 | 21 | 43 |
| | 1-9-2016 | | 19 | 18 | 37 |
| | 8-9-2016 | | 10 | 15 | 25 |
| GHPS BELAKANAKUPPE | 21-07-2016 | 1 | 11 | 9 | 20 |
| | 29-07-2016 | 0 | 10 | 8 | 18 |
| | 04-08-2016 | 2 | 9 | 8 | 17 |
| | 11-08-2016 | | 10 | 8 | 18 |
| | 18-8-2016 | 2 | 12 | 9 | 21 |
| | 1-9-2016 | 1 | 12 | 9 | 21 |
| GLPS URAGANADODDI | 23-7-2016 | | 2 | 8 | 10 |
| | 6-8-2016 | 1 | 4 | 7 | 11 |
| | 20-8-2016 | 1 | 3 | 7 | 10 |
| SCDHS BANNERUGHATTA | 23-7-2016 | | 14 | 8 | 22 |
| | 6-8-2016 | 1 | 9 | 15 | 24 |
| | 20-8-2016 | | 12 | 9 | 21 |
| | | **10** | **192** | **197** | **389** |



- **ಅನಿಸಿಕೆಗಳು :** ವನ್ಯ ವಿಜ್ಞಾನ ಕಾರ್ಯಕ್ರಮಗಳ ಬಗ್ಗೆ ಶಿಕ್ಷಕರು ಮತ್ತು ವಿದ್ಯಾರ್ಥಿಗಳ ಅನಿಸಿಕೆಗಳು.

"ನಾವು ಗೌರಿಹೂವಿನ (Gloriosa Superba) ಬಗ್ಗೆ ತಿಳಿದುಕೊಂಡೆವು ಮತ್ತೆ ಗಣೇಶ ಹಬ್ಬಗಳಂದು ಗಣೇಶನ ವಿಗ್ರಹಗಳನ್ನು ಮಣ್ಣಿನಿಂದಲೇ ಮಾಡಬೇಕು ಹಾಗೂ ಬಣ್ಣ ಬಣ್ಣದ ಗಣೇಶಗಳನ್ನು ತರಬಾರದೆಂದು ಇಂತಹ ಗಣೇಶಗಳನ್ನು ಹಾನಿಕಾರಕ ರಾಸಾಯನಿಕಗಳಿಂದ ಮಾಡಿರುತ್ತಾರೆಂದು ಇದರಿಂದ ಕೆರೆ ಮಲಿನವಾಗಿ ಜಲಚರಗಳಿಗೆ ತೊಂದರೆಯಾಗುತ್ತದೆಂದು ತಿಳಿಸಿಕೊಟ್ಟರು"

-ದರ್ಶನ್ ಗೌಡ. 8ನೇ ತರಗತಿ.
ಸ.ಹಿ.ಪ್ರಾ.ಶಾಲೆ, ತಟ್ಟೆಕೆರೆ.

"ನಮ್ಮ ಸುತ್ತಮುತ್ತಲು ಇರುವ ಪಕ್ಷಿಗಳು ಮತ್ತು ಕೀಟಗಳನ್ನು ಗಮನಿಸಿ ಅವುಗಳ ಬಗ್ಗೆ ತಿಳಿಯುವ ಆಸಕ್ತಿ ಹೆಚ್ಚಿಸಿದ್ದಲ್ಲದೆ, ನಮ್ಮೂರಿನ ಕೆರೆಯ ಪ್ರಾಮುಖ್ಯತೆಯ ಬಗ್ಗೆ ಜಾಗೃತಿಯನ್ನು ಮೂಡಿಸಿದರು".

- ಕೀರ್ತಿ .ಜಿ .ಎಂ, 7ನೇ ತರಗತಿ.
ಸ.ಹಿ.ಪ್ರಾ.ಶಾಲೆ, ಬಿಳಗನಕುಪ್ಪೆ

"ನಮಗೆ ನೀವು ಬಂದದ್ದು ತುಂಬಾ ಖುಷಿ ಅನಿಸಿತು. ವಿಜ್ಞಾನದ ಪ್ರಯೋಗಗಳಲ್ಲಿ ನಮಗೆ ಈ ಮೊದಲು ಮೋಟಾರುಗಳ ಬಗ್ಗೆ ಓದಿದ್ದೇವೆ ಆದರೆ ಮೋಟಾರುಗಳ ಕಾರ್ಯವಿಧಾನದ ಬಗ್ಗೆ ಎಂದು ಪ್ರಯೋಗ ಮುಖಾಂತರ ತಿಳಿಸಿದ್ದರಿಂದ ಮೋಟಾರುಗಳ ಬಗ್ಗೆ ಸಂಪೂರ್ಣ ಮಾಹಿತಿ ತಿಳಿದಂತಾಯಿತು".

ಕಿರಣ್ ರಾವ್.ಎಸ್.ಜಿ. 8 ನೇ ತರಗತಿ
ಶ್ರೀ ಚಂಪಕಧಾಮ ಸ್ವಾಮಿ ಪ್ರೌಢಶಾಲೆ,
ಬನ್ನೇರುಘಟ್ಟ.



"ಈ ಕಾರ್ಯಕ್ರಮದಿಂದ ಪ್ರಾಣಿ, ಪಕ್ಷಿ, ಕೀಟ, ಮೀನುಗಳ ಬಗ್ಗೆ ತಿಳಿದು ಅವುಗಳ ವಾಸ ಆಹಾರದ ಬಗ್ಗೆ ತುಂಬ ಚೆನ್ನಾಗಿ ಮಕ್ಕಳು ತಿಳಿದುಕೊಂಡರು. ಪ್ರಾಣಿಗಳ ಹೆಜ್ಜೆ ಗುರುತುಗಳ ಬಗ್ಗೆ ಹಾಗೂ ಪಕ್ಷಿಗಳ ಗೂಡುಗಳ ವಿಧಗಳ ಬಗ್ಗೆಯೂ ತುಂಬ ಚೆನ್ನಾಗಿ ತಿಳಿಸಿಕೊಟ್ಟಿದ್ದಾರೆ".


- ಶ್ರೀ ರಾಮಯ್ಯ, ಮುಖ್ಯಶಿಕ್ಷಕರು.
ಸ.ಕಿ.ಪ್ರಾ.ಶಾಲೆ, ಉರಗನದೊಡ್ಡಿ.

"ಹಸ್ತದ ಮೂಲಕ ಆನೆಯ ಚಿತ್ರ ಬಿಡಿಸಬಹುದೆಂದು ಹಾಗೂ ಮಕ್ಕಳಲ್ಲಿ ಅಡಗಿರುವ ಸೃಜನಶೀಲ ಕೌಶಲ್ಯಗಳನ್ನು ಹೊರತರುವಲ್ಲಿ ನಿಮ್ಮ ತಂಡದ ಪ್ರಯತ್ನ ಶ್ಲಾಘನೀಯ. ಕಾಡುಪ್ರಾಣಿಗಳು ಮತ್ತು ಮಾನವರಿಗಿರುವ ಅವಿನಾಭಾವ ಸಂಬಂಧ ಹಾಗೂ ಕಾಡಿನಿಂದ ಮಾನವನಿಗಾಗುತ್ತಿರುವ ಉಪಯೋಗಗಳ ಬಗ್ಗೆ ಹಾಗೂ ನನ್ನೂರಿನ ಕೆರೆಯ ಉಪಯೋಗ ಹಾಗೂ ಅದರ ಸಂರಕ್ಷಣೆಯ ಬಗ್ಗೆ ನಮ್ಮ ಮಕ್ಕಳಿಗೆ ತಿಳಿಸಿದ ರೀತಿ ಉತ್ತೇಜನಕಾರಿಯಾಗಿತ್ತು"

- ಶ್ರೀಮತಿ ಪುಷ್ಪಲತಾ, ಮುಖ್ಯಶಿಕ್ಷಕರು.
ಸ.ಹಿ.ಪ್ರಾ.ಶಾಲೆ, ಬಿಳಗನಕುಪ್ಪೆ

"ವನ್ಯ ವಿಜ್ಞಾನ" ತಂಡ ನಮ್ಮ ಅಕ್ಕಪಕ್ಕದಲ್ಲೇ ಇರುವಂತಹ ಹತ್ತಿಮರ ಅದೆಷ್ಟೋ ಕೀಟ, ಪಕ್ಷಿಗಳಿಗೆ ಆಸರೆಯಾಗಿವೆ ಎಂದು ತಿಳಿದು ನನಗೇ ಆಶ್ಚರ್ಯವಾಯಿತು. ಹಾಗೂ ಆಹಾರ ಸರಪಳಿ, ಮಾನವ ಹಾಗೂ ವನ್ಯಜೀವಿಗಳ ನಡುವೆ ನಡೆಯುತ್ತಿರುವ ಸಂಘರ್ಷದ ಬಗೆಗಿನ ಸಾಕ್ಷಾಚಿತ್ರ ನಮ್ಮ ಮಕ್ಕಳಲ್ಲಿ ಜ್ಞಾನವನ್ನು ಹೆಚ್ಚಿಸಿತಲ್ಲದೇ, ಪರಿಸರದ ಮೇಲಿನ ಕುತೂಹಲ ಹಾಗೂ ಆಸಕ್ತಿ ದ್ವಿಗುಣಗೊಳಿಸಿದೆ.

- ಶ್ರೀಮತಿ ಶಶಿಕಲಾ, ಸಹ ಶಿಕ್ಷಕರು.
ಸ.ಹಿ.ಪ್ರಾ.ಶಾಲೆ, ಬಿಳಗನಕುಪ್ಪೆ



## ಛಾಯಾಚಿತ್ರಗಳು :



ವನ್ಯವಿಜ್ಞಾನದಲ್ಲಿ ಮಕ್ಕಳೊಂದಿಗೆ ವನಸಂಚಾರ.





ಮಕ್ಕಳ ಕೈಯಿಂದ ಅರಳಿದ ಚಿತ್ರಗಳು.





ಮಕ್ಕಳೇ ಮಾಡಿ ಖುಷಿಪಟ್ಟ ವಿಜ್ಞಾನದ ಪ್ರಯೋಗಗಳು.





ಸಾಕ್ಷ್ಯಚಿತ್ರದೊಂದಿಗೆ ವನ್ಯಜೀವಿಗಳ ವಿಶ್ವರೂಪ ದರ್ಶನ.



**ಉಲ್ಲೇಖಗಳು :**


1. ಸುಜಾತಾ ಪದ್ಮನಾಭನ್, ಸುನಿತಾ ರಾವ್, ಯಶೋಧರಾ ಕುಂಡಾಜಿ, ಕನ್ನಡಕ್ಕೆ ನಾಗೇಶ ಹೆಗಡೆ,. ವನ ಸಂಜೀವನ ಶಿಕ್ಷಕರಿಗಾಗಿ ಪರಿಸರ ಕೈಪಿಡಿ ಬಿ ಆರ್ ಟಿ ಅಭಯಾರಣ್ಯ, ಕರ್ನಾಟಕ., ನವಕರ್ನಾಟಕ ಪ್ರಕಾಶನ,. 2008.
2. ಕೆ. ಪಿ. ಪೂರ್ಣಚಂದ್ರ ತೇಜಸ್ವಿ,. ಹಕ್ಕಿಪುಕ್ಕ ಕನ್ನಡ ನಾಡಿನ ಹಕ್ಕಿಗಳ ಪುಸ್ತಕ,. ಪುಸ್ತಕ ಪ್ರಕಾಶನ,. 1998.
3. ಎ. ಕವಿತ, ಎನ್. ದೀಪ್ತಿ, ಆರ್. ಗಣೇಶನ್, ಎಸ್. ಸಿ.ಗ್ಲಾಡ್ವಿನ್ ಜೋಸೆಫ್,. ಕರ್ನಾಟಕದ ಸಾಮಾನ್ಯ ಒಣಭೂಮಿ ಮರಗಳು,. ATREE,. 2012.
4. ಕಾರ್ತಿಕೇಯನ್ .ಎಸ್,. ಡಿಸ್ಕವರ್ ಅವಿನ್ಯೂ ಟ್ರೀಸ್ ಎ ಪಾಕೆಟ್ ಗೈಡ್,. ECO EDU,. 2014.
5. ಕೆ. ಆರ್. ಕಿಶನ್ ದಾಸ್,. ಚಿಟ್ಟೆಗಳು ಒಂದು ವೈಜ್ಞಾನಿಕ ಒಳನೋಟ,. ಅರಿವು ಎಜುಕೇಷನ್ ಆಂಡ್ ಕಲ್ಚರಲ್ ಟ್ರಸ್ಟ್,. 2009.
6. Krys Kazmierczak, Van Perlo,. A Field Guide to the Birds of India Sri Lanka, Pakistan, Nepal, Bhutan, Bangladesh and the Maldives,. Om Book Service,. 2006.